ಕಂದು ಮಿಶ್ರಿತ. ಕಪ್ಪು ಮಚ್ಚೆಗಳು ಕಾಣಿಸಿಕೊಳ್ಳುತ್ತದೆ. ಸಾಮಾನ್ಯವಾಗಿ ಈ ರೋಗ ಪ್ರಸಾರವು ಬೀಜ ಮತ್ತು ಮಣ್ಣಿನಲ್ಲಿರುವ ಶಿಲೀಂಧ್ರದಿಂದಾಗಿರುತ್ತದೆ.

ಸೊರಗು ಬೇರು ಕೊಳೆ ರೋಗ :

ಭೂಮಿಯ ಮೇಲೆ ಹಾಗೂ ಕೆಳಗಿನ ಎಲ್ಲಾ ಭಾಗಗಳು ರೋಗದ ಲಕ್ಷಣವನ್ನು ತೋರಿಸುತ್ತವೆ. ಈ ರೋಗವು ಬೆಳೆಯ ಬಲಿತಂತೆಲ್ಲಾ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತದೆ. ಭೂಮಿಗೆ ಹೊಂದಿಕೊಂಡಿರುವ ಕಾಂಡದ ಮೇಲೆ ಅಥವಾ ಅದೇ ಭಾಗದ ಭೂಮಿಯ ಒಳಗೆ 1 ರಿಂದ 2.5 ಸೆಂ.ಮೀ. ಗಳ ಪ್ರದೇಶದಲ್ಲಿ ರೋಗದ ಲಕ್ಷಣಗಳು ಗೋಚರಿಸುತ್ತವೆ. ಇವುಗಳು ದಟ್ಟ ಕಂದು ಬಣ್ಣದ ಪ್ರದೇಶಗಳಿಂದ ಕೂಡಿರುತ್ತದೆ. ಕೆಲವೇ ಸಮಯದಲ್ಲಿ ಈ ಭಾಗಗಳಲ್ಲಿ ಶಿಲೀಂದ್ರದ ಬಿಳಿ ಕವಚ ಪದರ ಬೆಳೆಯುತ್ತವೆ ಹಾಗೂ ಕಾಂಡವನ್ನು ಸುತ್ತವರಿಯುತ್ತದೆ. ಇಂತಹ ರೋಗ ಪೀಡಿತ ಸಸ್ಯಗಳ ಎಲೆಗಳು ಹಳದಿ ಅಥವಾ ಕಂದು ಬಣ್ಣದಿಂದ ಕೂಡಿರುತ್ತವೆ. ಈ ರೋಗಪೀಡಿತ ಭಾಗಗಳ ಮೇಲೆ ಕಂದು ಬಣ್ಣದ ಸಾಸಿವೆ ಕಾಳಿನಂತೆ ಶಿಲೀಂದ್ರದ "ಸ್ಕ್ಲೆರೋಷಿಯಾ" ಬೆಳವಣಿಗೆ ಫಲಗಳನ್ನು ನೋಡಬಹುದು.

ಕಡಲೆಯಲ್ಲಿ ಸಮಗ್ರ ರೋಗ ನಿರ್ವಹಣಾ ಕ್ರಮಗಳು

- ರೋಗದಿಂದ ಬಳಲಿದ ಗಿಡಗಳನ್ನು ಕಿತ್ತು ಸುಡುವುದು.
- ಟ್ರೈಕೊಡರ್ಮಾ ಜೈವಿಕ ಶಿಲಿಂದ್ರ ನಾಶಕದಿಂದ ಬೀಜೋಪಚಾರ ಮಾಡುವುದರಿಂದ (4 ಗ್ರಾಂ. ಪ್ರತಿ ಕೆ.ಜಿ. ಬೀಜಕ್ಕೆ) ಬೀಜದಿಂದ ಪ್ರಸರವಾಗುವ ಸೋಂಕನ್ನು ಕಡಿಮೆ ಮಾಡಬಹುದು.
- ಪ್ರತಿ ಒಂದು ಕೆ.ಜಿ. ಬಿತ್ತನೆ ಬೀಜವನ್ನು 2 ಗ್ರಾಂ. ಥೈರಾಮ್ ಅಥವಾ ಕ್ಯಾಪ್ಟನ್ ನಿಂದ ಬೀಜೋಪಚಾರ ಮಾಡುವುದು ಸೂಕ್ತ.
- ರೋಗ ನಿರೋಧಕ ಜೆ.ಜಿ–11. ಜೆ.ಬಿ.ಎಸ್–964 ಮತ್ತು ಜಾಕಿ–9218. ಜಿ.ಬಿ.ಎಮ್–2 ತಳಿಗಳನ್ನು ಬೆಳೆಯುವುದರಿಂದ ರೋಗವನ್ನು ಹತೋಟಿ ಮಾಡಬಹುದು.
- ರೋಗ ಪೀಡಿತ ಪ್ರದೇಶಗಳಲ್ಲಿ ಬೆಳೆ ಪರಿವರ್ತನೆಯಾಗಿ ಕಡಲೆಯ ನಂತರ ಜೋಳ ಅಥವಾ ಸಜ್ಜೆಗಳನ್ನು ಬೆಳೆಯುವುದರಿಂದ ರೋಗಗಳನ್ನು ಹತೋಟಿ ಮಾಡಬಹುದು.

ಬೂದಿ ರೋಗ :

ಕಡಲೆಯಲ್ಲಿ ಬೂದಿ ರೋಗವು ಶಿಲೀಂಧ್ರದಿಂದ ಬರುತ್ತಿದ್ದು ಇದು ಬಹುವಾರ್ಷಿಕ ಮತ್ತು ಆಸರೆ ಸಸ್ಯಗಳ ಮೇಲೆ ನೆರಳಿನಲ್ಲಿ ಬದುಕುತ್ತದೆ. ಕೊಯ್ಲು ಮಾಡಿದ ನಂತರ ಅಳಿದುಳಿದ ಸಸ್ಯಾವಶೇಷಗಳ ಮೇಲೆಯೂ ಸಹ ಜೀವಿಸುತ್ತದೆ. ನೀರಾವರಿ ಕಡಲೆಯಲ್ಲಿ ಹಾಗೂ ತಡವಾದ ಬಿತ್ತನೆಯಲ್ಲಿ ಈ ರೋಗ ಹೆಚ್ಚು. ಎಲೆಗಳ ಕೆಳಭಾಗದಲ್ಲಿ ಬಿಳಿ ಬೂದಿಯಂತಹ ಬೆಳೆವಣಿಗೆ ಕಂಡು ಬರುತ್ತದೆ. ರೋಗ ಹೆಚ್ಚಾದಂತೆ ಎಲೆಗಳು ಒಣಗಿ ಉದುರಿ ಹೋಗುತ್ತವೆ ಹಾಗೂ ಕಾಳು ಕಟ್ಟುವಿಕೆ ಪ್ರಮಾಣ ಕಡಿಮೆಯಾಗುವುದು.

ನಿರ್ವಹಣೆ :

- ಬೆಳೆ ಪರಿವರ್ತನೆ ಮಾಡಬೇಕು.
- ಕಾರ್ಬೆಂಡಾಜಿಮ್ 1 ಗ್ರಾಂ. ಅಥವಾ ಹೆಕ್ಸಾಕೋನಾಜೋಲ್ 1 ಮಿ.ಲೀ. ಪ್ರತಿ ಲೀಟರ ನೀರಿಗೆ ಬೆರಸಿ ಸಿಂಪಡಿಸಬೇಕು.
-

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು
ಅಂಚೆ ಪೆಟ್ಟಿಗೆ ಸಂಖ್ಯೆ– 329
ರಾಯಚೂರು– 584101
e-Mail: kvkraichur@gmail.co.in
kvk.Raichur@icar.gov.in
Website: www.kvkraichur.com

ಅಕ್ಷರ ಜೋಡಣೆ ಮತ್ತು ವಿನ್ಯಾಸ:
ಶ್ರೀ ದೇವರಾಜ ನಾಯಕ
ಕುಮಾರಿ ಸುಮಂಗಳಮ್ಮ ಎಮ್. ಮತ್ತು ಕುಮಾರಿ ಶಿಲ್ಪಾ

UASR/PC/LL-BG-1/2017-18

ಕೃಷಿ ವಿಶ್ವವಿದ್ಯಾಲಯ
ಐ.ಸಿ.ಎ.ಆರ್–ಕೃಷಿ ವಿಜ್ಞಾನ ಕೇಂದ್ರ
ರಾಯಚೂರು

ಕಡಲೆಯಲ್ಲಿ ಸಮಗ್ರ ಪೀಡೆ ನಿರ್ವಹಣೆ



ಲೇಖಕರು:
ಶ್ರೀ. ಬದರಿ ಪ್ರಸಾದ್ ಪಿ. ಆರ್
ಡಾ. ಎಂ. ವಿ. ರವಿ

ಸಂಪಾದಕರು:
ಡಾ. ರವಿ ಎಮ್.ವಿ.
ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು
ಕೆ.ವಿ.ಕೆ, ರಾಯಚೂರು

ಕಡಲೆಯು ಉತ್ತರ ಕರ್ನಾಟಕದ ಮುಖ್ಯವಾದ ಹಿಂಗಾರು ದ್ವಿದಳ ಧಾನ್ಯದ ಬೆಳೆಯಾಗಿದೆ. ಇದನ್ನು ಹೆಚ್ಚಾಗಿ ಆಳವಾದ ಕಪ್ಪು ಮಣ್ಣಿನಲ್ಲಿ ಬೆಳೆಯಲಾಗುತ್ತಿದೆ. ರಾಜ್ಯದಲ್ಲಿ ಈ ಬೆಳೆಯನ್ನು (ನೀರಾವರಿ ಮತ್ತು ಖುಷ್ಕಿ) 9.24 ಲಕ್ಷ ಹೆ. ಕ್ಷೇತ್ರದಲ್ಲಿ ಬೆಳೆಯುತ್ತಿದ್ದು, ಅಂದಾಜು 7.05 ಲಕ್ಷ ಟನ್ ಉತ್ಪಾದನೆಯಾಗುತ್ತಿದ್ದು, ಸರಾಸರಿ ಉತ್ಪಾದನೆ ಪ್ರತಿ ಎಕರೆಗೆ 321 ಕಿ. ಗ್ರಾಂ. ಇರುವುದು.

ಸಸ್ಯದ ಬೆಳವಣಿಗೆ ಹಂತದಿಂದ ಕೊಯ್ಲಿನ ನಂತರದ ಸಂಗ್ರಹಣೆ ಹಂತದವರೆಗೆ ಹೂ ಮತ್ತು ಕಾಯಿ ತಿನ್ನುವ ಕೀಟಗಳು ಕಡಲೆಯನ್ನು ಬಾಧಿಸುತ್ತವೆ. ಕಡಲೆಯನ್ನು ಬಾಧಿಸುವ ಕೀಟಗಳ ಸಂಖ್ಯೆ ದ್ವಿದಳ ಧಾನ್ಯಗಳಿಗೆ ಹೋಲಿಸಿದರೆ ಕಡಿಮೆ. ಏಕೆಂದರೆ ಗಿಡದ ಎಲ್ಲ ಹಸಿರು ಅಂಗಾಂಶಗಳ ಮೇಲೆ ದಟ್ಟವಾಗಿ ಕಂಡು ಬರುವ ಗ್ರಂಥಿಗಳನ್ನು ಹೊಂದಿರುವ ರೋಮಗಳು. ರೋಮಗ್ರಂಥಿಗಳು ಮ್ಯಾಲಿಕ್ ಮತ್ತು ಅಗ್ಜಾಲಿಕ್ ಕ್ಷಾರ ದ್ರವವನ್ನು ಸ್ರವಿಸುತ್ತವೆ. ಈ ಕ್ಷಾರಗಳು ಹಲವಾರು ಸಸ್ಯಹಾರಿ ಕೀಟಗಳನ್ನು ಬೆಳೆಗಳಿಂದ ವಿಮುಕ್ತಗೊಳಿಸುತ್ತದೆ. ಕಡಲೆಯನ್ನು ಬಾಧಿಸುವ ಪ್ರಧಾನ ಕೀಡೆಗಳಲ್ಲಿ ಕತ್ತರಿಸುವ ಹುಳು **(ಅಗ್ರೋಟಿಸ್ ಇಪ್ಸಲಾನ)** ಮತ್ತು ಹಸಿರು ಕೀಡೆ **(ಹೆಲಿಕೋವರ್ಪಾ ಆರ್ಮಿಜೆರ)** ಮುಖ್ಯವಾದವು. ಈ ಕೀಟಗಳನ್ನು ನಿಯಂತ್ರಿಸಲು ಬಳಸುವ ಸರ್ವಕ್ರಮಗಳು ಬಗ್ಗೆ ಮತ್ತು ಕೀಟಗಳ ಬಗ್ಗೆ ಮಾಹಿತಿಯನ್ನು ಅರಿಯುವುದು ಅವಶ್ಯಕ.

ಪ್ರಮುಖ ಕೀಟಗಳು:

ಕಾಂಡ ಕತ್ತರಿಸುವ ಹುಳು (ಅಗ್ರೋಟಿಸ್ ಇಪ್ಸಿಲಾನ) :

ಮರಿ ಕೀಡೆಗಳು ಭೂಮಿಯ ಮೇಲ್ಭಾಗದಲ್ಲಿನ ಸಸಿಗಳ ಎಳೆ ಕಾಂಡವನ್ನು ಕತ್ತರಿಸುವದರಿಂದ ಸಸಿಗಳು ಸಾಯುತ್ತವೆ. ಈ ರೀತಿ ಬಿದ್ದ ಸಸಿಗಳ ಎಲೆಗಳನ್ನು ಸಹ ತಿನ್ನುತ್ತವೆ. ಕತ್ತರಿಸುವ ಹುಳುಗಳ ಮರಿ ಕೀಡೆಗಳು ಮಣ್ಣಿನಲ್ಲಿ ಅಥವಾ ಬಾಧೆಗೊಳಗಾದ ಸಸ್ಯಗಳ ಒಣ ಎಲೆಗಳಲ್ಲಿ ಕಂಡುಬರುತ್ತದೆ. ಕೀಡೆಗಳು ರಾತ್ರಿ ವೇಳೆಯಲ್ಲಿ ಚುರುಕಾಗಿದ್ದು ಹಗಲಿನಲ್ಲಿ ಮಣ್ಣಿನಲ್ಲಿ ಸೇರಿಕೊಳ್ಳುತ್ತವೆ. ಕೋಶಾವಸ್ಥೆ ಮಣ್ಣಿನಲ್ಲಿ ಆಗುತ್ತದೆ.

ನಿರ್ವಹಣಾ ಕ್ರಮಗಳು :

- ಆಳವಾದ ಮಾಗಿ ಉಳುಮೆ ಮಾಡುವುದರಿಂದ ಪ್ರಖರ ಸೂರ್ಯನ ಕಿರಣಗಳಿಗೆ ಕೋಶವಾಸ್ಥೆಯಲ್ಲಿರುವ ಕೀಡೆಗಳು ಸಾಯುತ್ತವೆ.
- ಬೆಳೆ ಪರಿವರ್ತನೆ ಮಾಡುವುದರಿಂದ ಈ ಕೀಟದ ನಿಯಂತ್ರಣ ಮಾಡಬಹುದು.

ಹಸಿರು ಕಾಯಿ ಕೊರಕ ಕೀಡೆ (ಹೆಲಿಕೊವರ್ಪಾ) :

ಹೆಲಿಕೊವರ್ಪಾ ಕೀಡೆಯು ಮೊದಲು ಎಲೆಗಳನ್ನು ಕೆರೆದು ತಿನ್ನುತ್ತದೆ. ಆಮೇಲೆ ಮೊಗ್ಗು, ಹೂವು ಮತ್ತು ಕಾಯಿಗಳನ್ನು ತಿನ್ನುತ್ತದೆ. ಪ್ರಾರಂಭದಲ್ಲಿ ಎಲೆಗಳನ್ನು ಕೆರೆದು ತಿನ್ನುವುದರಿಂದ ಎಲೆಗಳು ಸಂಪೂರ್ಣವಾಗಿ ಪತ್ರಹರಿತ್ತನ್ನು ಕಳೆದುಕೊಂಡು ಗಿಡಗಳು ಒಣಗಿ ಸಸ್ಯದ ಬೆಳವಣಿಗೆ ಕುಂಠಿತಗೊಳ್ಳುತ್ತದೆ. ಬಲಿತ ಕೀಡೆಗಳು ಕಾಯಿಗಳನ್ನು ತಿನ್ನುವುದರಿಂದ ಇಳುವರಿ ಕಡಿಮೆಯಾಗುತ್ತದೆ. ಬೇರೆ ಬೆಳೆಗಳಲ್ಲಿ ತತ್ತಿಗಳನ್ನು ಮೊಗ್ಗುಗಳ ಮೇಲೆ ಮತ್ತು ಎಲೆಕಾಯಿಗಳಲ್ಲಿ ಇಡಲ್ಪಟ್ಟರೆ. ಕಡಲೆಯಲ್ಲಿ ತತ್ತಿಗಳನ್ನು ಎಲೆಗಳ ಮೇಲೆ ಇಡುತ್ತದೆ. ಈ ಕೀಡೆಯು ಕಡಲೆಯಲ್ಲಿ ಶೇ. 40–50 ರಷ್ಟು ಹಾನಿಯನ್ನುಂಟು ಮಾಡುತ್ತದೆ. ಪ್ರೌಢ ಹೆಲಿಕೊವರ್ಪಾ ಕೀಟವು ಮಾಸಲು ಕಂದು ಬಣ್ಣದ ರೆಕ್ಕೆಗಳನ್ನು ಹೊಂದಿದ್ದು. ರೆಕ್ಕೆಯ ಅಳತೆ ಸುಮಾರು 40 ಮಿ. ಮೀ. ಆಗಿರುತ್ತದೆ. ಪ್ರತಿ ಹೆಣ್ಣು ಪತಂಗವು ತತ್ತಿಗಳನ್ನು ಬಿಡಿಬಿಡಿಯಾಗಿ ಎಲೆಗಳ ಮೇಲೆ ಇಡುತ್ತದೆ. ಪೂರ್ತಿ ಬೆಳೆದ ಕೀಡೆಯು 30–40 ಮಿ.ಮೀ. ಉದ್ದವಿದ್ದು, ಅವುಗಳ ಬಣ್ಣದಲ್ಲಿ ಗಮನಾರ್ಹ ವೈವಿಧ್ಯತೆ ಕಂಡು ಬರುತ್ತದೆ. ಕೋಶಾವಸ್ಥೆಯನ್ನು ಮಣ್ಣಿನಲ್ಲಿ ಕಳೆಯುತ್ತದೆ. ಅನುಕೂಲಕರ ವಾತಾವರಣದಲ್ಲಿ ಒಂದು ಸಂತತಿಯನ್ನು 4 ವಾರಗಳಲ್ಲಿ ಮುಗಿಸುತ್ತದೆ.

ನಿರ್ವಹಣಾ ಕ್ರಮಗಳು :

- ಕಡಲೆಯಲ್ಲಿ ಪ್ರತಿ ಗಿಡಕ್ಕೆ ಒಂದು ಕೀಡೆ ಕಂಡುಬಂದಾಗ ಸಸ್ಯ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳಬೇಕು.
- ಕೀಟ ನಿರೋಧಕ ಶಕ್ತಿಯುಳ್ಳ ಹಾಗೂ ಬೇಗನೆ ಮಾಗುವ ತಳಿಯನ್ನು ಉಪಯೋಗಿಸಬೇಕು (ಐ.ಸಿ.ಸಿ.ವಿ 2. ಜೆ.ಜಿ–11 ಮತ್ತು ಜಾಕಿ–9218. ಜಿ.ಬಿ.ಎಮ್–22)
- ರೈತರು ಕೀಟ ಭಕ್ಷಕ ಪಕ್ಷಿಗಳಿಗೆ ಕೂಡಲು ಕವಲೊಡೆದ ಟೊಂಗೆಗಳನ್ನು ಬೆಳೆಗಿಂತ ಸ್ವಲ್ಪ ಎತ್ತರದಲ್ಲಿ ಇರುವಂತೆ ಅಥವಾ ಕೀಡೆಭಕ್ಷಕ ಪಕ್ಷಿಗಳನ್ನು ಆಕರ್ಷಣೆ ಮಾಡಲು ಕಡಲೆ ಬಿತ್ತುವಾಗ 50 ಗ್ರಾಂ./ಹೆಕ್ಟೇರಿಗೆ ಬಿತ್ತುವಾಗ ಜೋಳ ಅಥವಾ ಸೂರ್ಯಕಾಂತಿ ಬೀಜಗಳನ್ನು ಸೇರಿಸಿ ಬಿತ್ತನೆ ಮಾಡಬೇಕು.
- ಪ್ರತಿ ಲೀಟರ ನೀರಿಗೆ ಶೇ.5 ರ ಬೇವಿನ ಬೀಜದ ಕಷಾಯ ಬಳಸಬೇಕು ಅಥವಾ ಬೇವು ಮೂಲದ ಕೀಟನಾಶಕಗಳನ್ನು ಪ್ರತಿ ಲೀಟರ ನೀರಿಗೆ 2 ಮಿ.ಲೀ. ಯಂತೆ ಬಳಸುವದರಿಂದ ಹೆಣ್ಣು ಪತಂಗಗಳು ತತ್ತಿ ಇಡುವುದನ್ನು ತಡೆಯಬಹುದು.
- ಕೀಟನಾಶಕಗಳಾದ 0.075 ಮಿ. ಲೀ. ಫ್ಲೂಬೆಂಡಿಯಾಮೈಡ್ 39.35 ಎಸ್.ಸಿ. ಅಥವಾ ಕ್ಲೋರೆಂಟ್ರಿನಾಲಿಪ್ರೋಲ 18.5 ಎಸ್. ಸಿ. 0.15 ಮಿ. ಲೀ. ಅಥವಾ 0.2 ಗ್ರಾಂ. ಇಮಾಮೆಕ್ಟಿನ್ ಬೆಂಜೋಯೇಟ 5 ಎಸ್. ಸಿ. ಅಥವಾ 0.1 ಮಿ. ಲೀ. ಸ್ಪೈನೊಸ್ಯಾಡ್ 45 ಎಸ್. ಸಿ. ಅಥವಾ 0.3 ಮಿ. ಲೀ. ಇಂಡಾಕ್ಸಾಕಾರ್ಬ್ 14.5 ಎಸ್. ಸಿ. ಅಥವಾ 4 ಗ್ರಾಂ ಕಾರ್ಬರಿಲ್ 50 ಡಬ್ಲ್ಯೂಪಿ. ಅಥವಾ 1.0 ಮಿ.ಲೀ. ಮಿಥೈಲ್ ಪ್ಯಾರಾಥಿಯಾನ್ 50 ಇ.ಸಿ. ಅಥವಾ 2 ಮಿ. ಲೀ. ಕ್ವಿನಾಲ್‌ಫಾಸ್ 25 ಇ.ಸಿ. ಅಥವಾ 2 ಮಿ.ಲೀ. ಮಿಥೊಮಿಲ್ 40 ಎಸ್.ಪಿ. ಅಥವಾ 2 ಮಿ.ಲೀ. ಪ್ರೋಫೆನೋಫಾಸ್ 50 ಇ.ಸಿ. ಅಥವಾ 1 ಗ್ರಾಂ ಅಸಿಫೇಟ್ 75 ಎಸ್.ಪಿ. ಅಥವಾ ಬೆಳ್ಳೊಳ್ಳಿ ಮತ್ತು ಹಸಿಮೆಣಸಿನಕಾಯಿ ಕಷಾಯವನ್ನು 20 ಮಿ. ಲೀ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.

ಕಡಲೆ ಬೆಳೆಯ ರೋಗಗಳು ಮತ್ತು ಹತೋಟಿ ಕ್ರಮಗಳು :

ಕಾಂಡ ಕೊಳೆ ರೋಗ :

ಈ ರೋಗವು ಕಡಲೆ ಬೆಳೆಗೆ ತಗಲಿ ಅತೀ ಹೆಚ್ಚಿನ ಹಾನಿಯನ್ನುಂಟು ಮಾಡುತ್ತದೆ. ರೋಗ ಪೀಡಿತ ಸಸ್ಯಗಳು ಕೆಲವೇ ಸಮಯದಲ್ಲಿ ನಾಶವಾಗುತ್ತವೆ. ಬಲಿಯುವ ಮೊದಲೇ ಎಲೆಗಳು ಕೂಡಾ ಹಳದಿ ಬಣ್ಣಕ್ಕೆ ರೂಪಾಂತರಗೊಂಡಿದ್ದು ಉದುರಿಹೋಗುತ್ತವೆ. ರೋಗ ಪೀಡಿತ ಸಸ್ಯಗಳ ಕುತ್ತಿಗೆಯ ಬಾಗದಲ್ಲಿ ಅಂಗಾಂಶಗಳು ನಾಶಗೊಂಡು ಭೂಮಿಯಿಂದ ಸುಲಭವಾಗಿ ಕೀಳಬಹುದು. ರೋಗಪೀಡಿತ ಗಿಡಗಳ ಕಾಂಡದ ಬುಡಭಾಗವನ್ನು ಸೀಳಿ ಪರೀಕ್ಷಿಸಿದಾಗ ಅವುಗಳ ಮೇಲೆ